ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ.

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್: 08192 - 260969

ತ್ರೈಮಾಸಿಕ ಪತ್ರಿಕೆ
Quarterly News Letter
ಅಕ್ಟೋಬರ್-ಡಿಸೆಂಬರ್ 2013

ಮಿಂಚಂಚೆ: dvgtkvk@yahoo.com
Website:www.taralabalukvk.com
ಸಂಪುಟ - 7 ಸಂಚಿಕೆ -1

## ಸಿಂಚನಕ್ಕೆ ಮುನ್ನ........

**ಸಹೃದಯ ಬಂಧುಗಳೇ,**

" ಕೃಷಿ ಅಲೆಯಲಿ ಬನ್ನಿ ತೇಲೋಣ, ನಾವೇ ಬಿತ್ತಿ ಬೆಳೆದ ಅನ್ನವ ತಿನ್ನೋಣ' ಎನ್ನುವ ಮಾತನ್ನು ಮನದಲ್ಲಿರಿಸಿಕೊಳ್ಳುತ್ತಾ ಹೊಸವರ್ಷವನ್ನು ಸ್ವಾಗತಿಸೋಣ (2014). ಕಳೆದ 2013ನೇ ವರ್ಷದ ಕಡೇ 3 ಮಾಸಗಳ ಚಟುವಟಿಕೆಗಳು ತುಂಬಾ ಆಸಕ್ತಿದಾಯಕವಾಗಿದ್ದವು. ಅಕ್ಟೋಬರ್ ತಿಂಗಳಲ್ಲಿ "ಸಣ್ಣ ಕೃಷಿ ಹಿಡುವಳಿಗಳ ಸುಸ್ಥಿರ ಸಮೃದ್ಧತೆಯೆಡೆಗೆ" ಧ್ಯೇಯ ವಿಷಯವಾಗಿದ್ದ ಕೃಷಿ ವಿಜ್ಞಾನ ಕೇಂದ್ರಗಳ 8ನೇ ರಾಷ್ಟ್ರೀಯ ಸಮ್ಮೇಳನ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ಸಂಶೋಧನಾ ಕೇಂದ್ರಗಳು ಮತ್ತು ರೈತರುಗಳು ಭಾಗವಹಿಸಿದ್ದವು. ಅದು ಮುಗಿದು ಧೂಳು ಇಳಿಯುವ ಮುನ್ನವೇ ಅಂತರರಾಷ್ಟ್ರೀಯ ಕೃಷಿ ಮೇಳ ಅದೇ ಜಾಗದಲ್ಲಿ ತುಂಬಾ ವಿನೂತನವಾಗಿ ಆಯೋಜಿಸಲ್ಪಟ್ಟಿತ್ತು. ಇವುಗಳಲ್ಲಿ ಭಾಗವಹಿಸಿದ ನಮ್ಮ ತಂಡಕ್ಕೆ ಮತ್ತು ರೈತರಿಗೆ ತಾಂತ್ರಿಕ ಮಾಹಿತಿ ಪೂರಿತ ಹೊಸ ಅನುಭವಗಳಾಗಿದ್ದವು. ವಿಶ್ವ ಆಹಾರ ದಿವಸ, ಕೃಷಿಯಲ್ಲಿ ಮಹಿಳೆ ದಿವಸ ಮತ್ತು ಕೃಷಿಕ ಸನ್ಮಾನ ದಿವಸಗಳನ್ನು ಕೇಂದ್ರದಲ್ಲಿ ಆಚರಿಸಿದ್ದೇವೆ. ಕೃಷಿಕ ಸನ್ಮಾನ ದಿವಸದಂದು ರಾಜ್ಯಮಟ್ಟದ ವಿಚಾರಗೋಷ್ಠಿಯನ್ನು"ಒಳನಾಡು ಜಲಕೃಷಿಯಲ್ಲಿ ಇತ್ತೀಚಿನ ತಾಂತ್ರಿಕತೆಗಳು" ಕುರಿತು ಏರ್ಪಡಿಸಲಾಗಿತ್ತು. ಸಹಜ ಕೃಷಿಯ ಬಗ್ಗೆ ನಮಗೆ ಮತ್ತು ರೈತರಿಗಿರುವ ಕುತೂಹಲಕ್ಕಾಗಿ ಒಂದು ಕಾರ್ಯಾಗಾರವನ್ನು ನಡೆಸಿ, ನಂತರ, ಸಹಜ 'ಕೃಷಿ ಬಳಗ-ದಾವಣಗೆರೆ' ಎಂಬ ಸಮೂಹವನ್ನು ರಚಿಸಲಾಗಿದೆ. ಈ ಸಮೂಹ ಪ್ರತಿ ತಿಂಗಳ ಮೊದಲ ಶನಿವಾರ ಕೇಂದ್ರದಲ್ಲಿ ಸಭೆ ಸೇರುತ್ತಿದೆ. ಸಾವಯವ ಶನಿವಾರ ಸಂತೆ ಚೆನ್ನಾಗಿ ನಡೆಯುತ್ತಿದೆ. ಕೃಷಿ ಇಲಾಖೆ ಪ್ರಾಯೋಜಿತ ಸಿರಿಧಾನ್ಯ ಮೇಳವು ದಾವಣಗೆರೆಯ ಸಾರ್ವಜನಿಕರನ್ನು ಸಿರಿಕಿರಿ ಧಾನ್ಯಗಳೆಡೆಗೆ ಸೆಳೆದುಕೊಳ್ಳುವಲ್ಲಿ ತಕ್ಕಮಟ್ಟಿಗೆ ಸಫಲವಾಗಿತ್ತು. ತೆಂಗಿನ ಸಂರಕ್ಷರ ಪಡೆ ಕಟ್ಟುವ ಕಾರ್ಯ ತರಬೇತಿಗಳ ರೂಪದಲ್ಲಿ ಮುಂದುವರಿದಿದೆ. ವಿಶೇಷವಾದ ಜೇನು ತರಬೇತಿ ಕಾರ್ಯಕ್ರಮ ನಡೆದು ನಮ್ಮ ಕದಳೀವನದಲ್ಲಿ ಮತ್ತೆ ಜೇನು ಪೆಟ್ಟಿಗೆ ಇಡಿಸುವ ಪ್ರೇರಣೆ ನೀಡಿತು. ಕೃಷಿ ಇಲಾಖೆಯ ಅನುವುಗಾರರು, ತೋಟಗಾರಿಕಾ ಇಲಾಖೆಯ ಸಮಸ್ತ ಸಿಬ್ಬಂದಿಗಳೊಂದಿಗೆ ವಿಸ್ತರಣಾ ಅಧಿಕಾರಿಗಳಿಗಾಗಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ನಮ್ಮೆಲ್ಲರನ್ನು ಮತ್ತಷ್ಟು ಹತ್ತಿರವಾಗಿಸಿದವು. ಗದಗ, ಹಾವೇರಿ, ಚಿತ್ರದುರ್ಗ, ಕಾಸರಗೋಡು, ಶಿವಮೊಗ್ಗ, ಜಿಲ್ಲೆಗಳ ಕೃಷಿ ವಿಜ್ಞಾನ ಕೇಂದ್ರವನ್ನು ನಮ್ಮ ತಜ್ಞರುಗಳು ರೈತರೊಂದಿಗೆ ಭೇಟಿ ಪರಸ್ಪರ ಜ್ಞಾನ ವಿನಿಮಯ ಮಾಡಿಕೊಂಡಿರುವುದು ಅಧ್ಯಯನ ದೃಷ್ಟಿಯಿಂದ ಬೆಳೆದಂತಾಗಿದೆ. ಕಾಸರಗೋಡಿನ ಸಿಪಿಸಿಆರ್‌ಐ ಭೇಟಿಯಿಂದ ಪ್ರೇರಿತರಾಗಿರುವ ನಮ್ಮ ಕೃಷಿಕರೊಬ್ಬರು ***virgin coconut oil*** ಉದ್ಯಮದ ಬಗ್ಗೆ ತುಂಬಾ ಆಸಕ್ತಿ ಬೆಳೆಸಿಕೊಂಡಿದ್ದಾರೆ.

ಡಾ. ಆರ್.ಜಿ. ಗೊಲ್ಲರ್, ಜಂಟಿ ಕೃಷಿ ನಿರ್ದೇಶಕರು, ದಾವಣಗೆರೆ ಇವರು ತಮ್ಮ ವೃತ್ತಿ ಜೀವನವನ್ನು 31-12-2013 ರಂದು ಮುಗಿಸಿದರು. ಅವರಿಗೆ ಹೃದಯಸ್ಪರ್ಶಿ ಬೀಳ್ಕೊಡುಗೆ ಸಮಾರಂಭಗಳು ಅಲ್ಲಲ್ಲಿ ನಡೆದವು. ನಮ್ಮ ಕೇಂದ್ರದೊಂದಿಗೆ ಬೆಸೆದಿದ್ದ ಅವರ ಅವಿನಾಭಾವ ಸಂಬಂಧ ಖಂಡಿತವಾಗಿಯೂ ನಮ್ಮೆಲ್ಲ ಕಾರ್ಯಗಳಲ್ಲಿ ಸತ್ಪರಿಣಾಮವನ್ನು ಬೀರಿದೆ. ಅವರ ಒಡನಾಟ, ಮಾರ್ಗದರ್ಶನ, ಕರ್ತೃತ್ವ ಶಕ್ತಿ, ಮಾನವತಾವಾದ ಇದೆಲ್ಲವೂ ನಮಗೆಲ್ಲರಿಗೆ ಅಪ್ಯಾಯಮಾನವಾಗಿದ್ದವು.

***"Sir, we wish you a superb retired life."***

ಬಂಧುಗಳೇ, ಚಳಿಗಾಲ ಚರ್ಮದ ಅಂದವನ್ನು ತಟ್ಟಿ, ***Cold cream*** ಗಳ ವ್ಯಾಪಾರ ಹೆಚ್ಚಿಸಿದೆ. ಈ ಪತ್ರಿಕೆ ಕೈ ಸೇರುವಾಗ, ಸಂಕ್ರಾಂತಿ ಹಬ್ಬ ಮುಗಿದು, ಸೂರ್ಯದೇವ ಉತ್ತರದಕಡೆ ವಾಲಿ, ಬೇಸಿಗೆಯ ಬಿರುಬಿಸಿಲಿನ ಸುಳಿವನ್ನು ನೀಡಿ, ಭತ್ತದ ನಾಟಿ ಪ್ರಾರಂಭವಾಗಿ, ನಮ್ಮ 2014-15 ಸಾಲಿಗೆ ಕ್ರಿಯಾಯೋಜನೆ ತಯಾರಿ ಶುರುವಾಗಿ ------ ಓಹ್, ***it is all happening....,***

ನಿಮಗೆಲ್ಲರಿಗೂ ಈ 2014, "ಅಂತರರಾಷ್ಟ್ರೀಯ ಕುಟುಂಬ ಕೃಷಿ" ಯ ವರ್ಷದಾರಂಭದ ಶುಭಾಷಯಗಳನ್ನು ತಿಳಿಸುತ್ತಾ, ನಿಮ್ಮ ಶುಭಹಾರೈಕೆಗಳ ಸ್ಫೂರ್ತಿ ಶಕ್ತಿಯನ್ನು ಗ್ರಹಿಸುತ್ತಾ ಮತ್ತಷ್ಟು ಕೃಷಿ ಸವಾಲುಗಳಿಗೆ ಸನ್ನದ್ಧರಾಗುತ್ತೇವೆ. ಮತ್ತೆ ಸಿಗೋಣ ........

ಪ್ರೀತಿಯಿಂದ

**-ಡಾ. ದೇವರಾಜ್ ಟಿ.ಎನ್.**

## ಆಚರಿಸಿದ ವಿಶೇಷ ದಿನಾಚರಣೆಗಳು:



ದಿನಾಂಕ 17–10–2013 ರಂದು ಕೃಷಿ ಇಲಾಖೆ ದಾವಣಗೆರೆ ಇವರ ಸಹಯೋಗದಲ್ಲಿ 'ವಿಶ್ವ ಆಹಾರ ದಿನಾಚರಣೆ'ಆಚರಿಸಲಾಯಿತು.



ದಿನಾಂಕ 7–12–2013 ರಂದು ಬಾಪೂಜಿ ಪಾಲಿಟೆಕ್ನೀಕ್, ದಾವಣಗೆರೆ ಇವರ ಸಹಯೋಗದಲ್ಲಿ 'ಕೃಷಿಯಲ್ಲಿ ಮಹಿಳಾ ದಿನಾಚರಣೆ' ಆಚರಿಸಲಾಯಿತು.



ದಿನಾಂಕ 23–12–2013 ರಂದು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕ್ಯಾಡಮಿ ಸಂಯುಕ್ತಾಶ್ರಯದಲ್ಲಿ 'ರೈತರ ದಿನಾಚರಣೆ' ಅಂಗವಾಗಿ 'ಒಳನಾಡು ಮೀನು ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳು' ವಿಷಯದಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು.

## ಹಮ್ಮಿಕೊಂಡ ವಿಶೇಷ ಕಾರ್ಯಕ್ರಮಗಳು:



ದಿನಾಂಕ 29–10–2013 ರಂದು ಸಹಜ ಕೃಷಿ ಏನು? ಹೇಗೆ? ಎಲ್ಲಿ? ಇತ್ಯಾದಿ ವಿಷಯದಲ್ಲಿ ಒಂದು ದಿನದ ಕಾರ್ಯಗಾರ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 20–12–2013 ರಂದು ಚನ್ನಗಿರಿ ತಾಲ್ಲೂಕು ಬಿಲ್ಲಹಳ್ಳಿ ಗ್ರಾಮದಲ್ಲಿ ರೈತರ ಸಮಸ್ಯೆ ಗುರುತಿಸಲು 'ಗ್ರಾಮೀಣ ಸಹಭಾಗಿತ್ವ ಅಧ್ಯಯನ' ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 28–12–2013 ರಿಂದ 30–12–2013 ರವರೆಗೆ 3 ದಿನಗಳ 'ದಾವಣಗೆರೆ ಜಿಲ್ಲಾ ಮಟ್ಟದ ಸಿರಿ ಧಾನ್ಯ ಮೇಳ' ವನ್ನು ಕೃಷಿ ಇಲಾಖೆ, ಸಹಜ ಸಮೃದ್ಧ, ಬೆಂಗಳೂರು, ಶರಣ ಮುದ್ದಣ ಸಾವಯವ ಕೃಷಿಕರ ಬಳಗ, ಕುಂಬಳೂರು ಮತ್ತು ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 23–10–2013 ರಿಂದ 25–10–2013 ರವರೆಗೆ ಬೆಂಗಳೂರಿನಲ್ಲಿ ಆಯೋಜಿಸಿದ್ದ 8ನೇ ಕೃಷಿ ವಿಜ್ಞಾನ ಕೇಂದ್ರಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಕೇಂದ್ರದ ಕಾರ್ಯಕ್ರಮ ಸಂಯೋಜಕರು ಮತ್ತು ತಜ್ಞರು ಭಾಗವಹಿಸಿದ್ದರು.












ಕೇಂದ್ರದಿಂದ ತಂತ್ರಜ್ಞಾನ ಪಡೆದು ಜೈವಿಕ ತಂತ್ರಜ್ಞಾನ ಇಲಾಖೆ, ನವದೆಹಲಿ ಇವರ ಪ್ರಾಯೋಜಿತ ಯೋಜನೆಯಡಿ 'ಶಾವಿಗೆ ತಯಾರಿಸುವ' ಸ್ವ–ಉದ್ಯೋಗದಲ್ಲಿ ತೊಡಗಿರುವ ಶ್ರೀಮತಿ ಮಂಗಳಮ್ಮ, ಹಳೆ ಬಿಸಲೇರಿ, ದಾವಣಗೆರೆ ತಾ. ಇವರನ್ನು ದಾವಣಗೆರೆ ವಿಶ್ವ ವಿದ್ಯಾನಿಲಯ ದಿನಾಂಕ 9 ಹಾಗೂ 10 ನವೆಂಬರ್ 2013 ರಂದು ಹಮ್ಮಿಕೊಂಡಿದ್ದ 'ಭಾರತದಲ್ಲಿ ಗ್ರಾಮೀಣ ಮಹಿಳಾ ಉದ್ಯಮಶೀಲತೆ' ಬಗ್ಗೆ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸನ್ಮಾನಿಸಲಾಯಿತು.

## ಹಮ್ಮಿಕೊಂಡ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು



ತೆಂಗು ಅಭಿವೃದ್ಧಿ ಮಂಡಳಿ (ಸಿಡಿಬಿ), ಬೆಂಗಳೂರು ಮತ್ತು ಗ್ರಾಮೀಣ ಜೀವನೋಪಾಯ ಸಂವರ್ದನಾ ಸಂಸ್ಥೆ– ಜಿಲ್ಲಾ ಪಂಚಾಯತ್, ದಾವಣಗೆರೆ ಇವರ ಪ್ರಾಯೋಜಿತ 'ತೆಂಗಿನ ಮರ ಹತ್ತುವ ಹಾಗೂ ಸಸ್ಯ ಸಂರಕ್ಷಣಾ ಬಗ್ಗೆ 6 ದಿನಗಳ 3 ತಂಡಗಳಲ್ಲಿ 60 ಗ್ರಾಮೀಣ ಯುವಕರಿಗೆ ತರಬೇತಿ ನೀಡಲಾಗಿದೆ.



ದಿನಾಂಕ 28–10–2013 ರಿಂದ 30–10–2013 ರವರೆಗೆ ತೋಟಗಾರಿಕೆ ಇಲಾಖೆ ದಾವಣಗೆರೆ ಪ್ರಾಯೋಜಿತ "ಜೇನು ಸಾಕಣೆ" ಬಗ್ಗೆ ಜಿಲ್ಲೆಯ 50 ಜನ ರೈತರಿಗೆ ತರಬೇತಿ ನೀಡಲಾಗಿದೆ



ದಿನಾಂಕ 11–10–2013 ರಂದು ಕರ್ನಾಟಕ ಅಂಟಿ ಬಯೋಟೆಕ್ಸ್ ಮತ್ತು ಫಾರ್ಮಸುಟೀಕಲ್ಸ್ ಕಂಪನಿ ಲಿಮಿಟೆಡ್, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ ಪಶುಸಂಗೋಪನೆ ಮತ್ತು ಪಶು ವೈದ್ಯ ಸೇವಾ ಇಲಾಖೆಯ ಸಿಬ್ಬಂದಿಯವರಿಗೆ ಹೈನು ರಾಸುಗಳಲ್ಲಿ ಬಂಜೆತನ ಮತ್ತು ಕೆಚ್ಚಲು ಬಾವು ನಿರ್ವಹಣೆ.

## ವಿಸ್ತರಣಾ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ:



ದಿನಾಂಕ 30-10-2013 ರಂದು ಪಶು ಸಂಗೋಪನೆ ಮತ್ತು ಪಶು ವೈದ್ಯೆ ಸೇವಾ ಇಲಾಖೆಯ 85 ಪಶು ವೈದ್ಯಾಧಿಕಾರಿಗಳಿಗೆ 'ಕೃತಕ ಗರ್ಭದಾರಣೆ ತಂತ್ರಜ್ಞಾನ ಮತ್ತು ಜಾನುವಾರುಗಳಲ್ಲಿ ರೋಗಗಳ ನಿರ್ವಹಣೆ' ಬಗ್ಗೆ ಸೂರ್ಯ ಎಜೆನ್ಸಿ, ದಾವಣಗೆರೆ ಇವರ ಪ್ರಾಯೋಜಕತ್ವದಲ್ಲಿ 1 ದಿನದ ತರಬೇತಿ ನೀಡಲಾಯಿತು.



ದಿನಾಂಕ 23-10-2013 ರಂದು ತೋಟಗಾರಿಕೆ ಇಲಾಖೆ ಸಿಬ್ಬಂದಿಯವರಿಗೆ 'ತೋಟಗಾರಿಕೆ ಬೆಳೆಗಳ ಸಮಗ್ರ ನಿರ್ವಹಣೆ' ಬಗ್ಗೆ ತರಬೇತಿ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 13-12-2013 ರಂದು ಕೃಷಿ ಇಲಾಖೆಯ ಭೂ ಚೇತನಾ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಅನುವುಗಾರರಿಗೆ ಒಂದು ದಿನದ ತರಬೇತಿ ಹಮ್ಮಿಕೊಳ್ಳಲಾಗಿತ್ತು.

## ಭಾಗವಹಿಸಿದ ಕೃಷಿ ಮೇಳಗಳು



ದಿನಾಂಕ 25-27 ಅಕ್ಟೋಬರ್ 2013 ರಲ್ಲಿ ಕೃಷಿ ಮತ್ತುತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ ಇವರು ಆಯೋಜಿಸಿದ್ದ ಕೃಷಿ ಮೇಳದಲ್ಲಿ ಕೇಂದ್ರವು ಭಾಗವಹಿಸಿತ್ತು.

ದಿನಾಂಕ 07-11-2013 ರಂದು ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು ಇವರು ಆಯೋಜಿಸಿದ್ದ 'ಅಂತರರಾಷ್ಟ್ರೀಯ ಕೃಷಿ ಮೇಳಕ್ಕೆ' ಕೇಂದ್ರದ ತಜ್ಞರು ಭೇಟಿ ನೀಡಿದ್ದರು.



ದಿನಾಂಕ 26-12-2013 ರಂದು ದಾವಣಗೆರೆ ತಾಲ್ಲೂಕು ಆನಗೋಡು ಗ್ರಾಮದಲ್ಲಿ ಎಸ್.ಕೆ. ಡಿ.ಆರ್.ಡಿ.ಪಿ. ಯವರು ಆಯೋಜಿಸಿದ್ದ ಕೃಷಿ ಮೇಳದಲ್ಲಿ ಕೇಂದ್ರವು ಭಾಗವಹಿಸಿತ್ತು.

## ರೈತರ ಅಧ್ಯಯನ ಪ್ರವಾಸಗಳು





ದಿನಾಂಕ 21-11-2013 ರಂದು ಚನ್ನಗಿರಿ ತಾಲ್ಲೂಕು ಬಿಲ್ಲಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿರುವ 'ರೈತ ಕ್ಷೇತ್ರ ಪಾಠಶಾಲೆ' ಕಾರ್ಯಕ್ರಮದಡಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಶಿವಮೊಗ್ಗ ಮತ್ತು ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಸಂಶೋಧನಾ ಕೇಂದ್ರ, ತೀರ್ಥಹಳ್ಳಿಗೆ ಅಧ್ಯಯನ ಪ್ರವಾಸ ಕೈಗೊಳ್ಳಲಾಗಿತ್ತು.



ದಿನಾಂಕ 26 ಮತ್ತು 27 ಡಿಸೆಂಬರ್ 2013 ರಂದು ತೋಟಗಾರಿಕೆ ಇಲಾಖೆ, ದಾವಣಗೆರೆ ಇವರ ಸಹಯೋಗದಲ್ಲಿ ಸಿಪಿಸಿಆರ್‌ಐ, ವಿಟ್ಲ ಮತ್ತು ಕಾಸರಗೋಡು ಇಲ್ಲಿಗೆ ರೈತರಿಗಾಗಿ ಅಧ್ಯಯನ ಪ್ರವಾಸ ಹಮ್ಮಿಕೊಳ್ಳಲಾಗಿತ್ತು.

## ಕೃಷಿ ವಿಜ್ಞಾನ ಕೇಂದ್ರ ತಜ್ಞರ ಅಧ್ಯಯನ ಪ್ರವಾಸಗಳು



ದಿನಾಂಕ 5 ಮತ್ತು 6 ಡಿಸೆಂಬರ್ 2013 ರಂದು ಕೆ.ಹೆಚ್. ಪಾಟೀಲ್ ಕೃಷಿ ವಿಜ್ಞಾನ ಕೇಂದ್ರ, ಗದಗ



ದಿನಾಂಕ 12-12-2013 ರಂದು ಕೃಷಿ ವಿಜ್ಞಾನ ಕೇಂದ್ರ, ಚಿತ್ರದುರ್ಗ.

## ಹಮ್ಮಿಕೊಂಡ ಕ್ಷೇತ್ರೋತ್ಸವ



ದಿನಾಂಕ 25-11-2013ರಂದು ಹೊಸ ಚಿಕ್ಕನಹಳ್ಳಿ ಗ್ರಾಮದಲ್ಲಿ ಬಾಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಮುಂಚೂಣಿ ಪ್ರಾತ್ಯಕ್ಷಿಕೆಯ ಕ್ಷೇತ್ರೋತ್ಸವ ಹಮ್ಮಿಕೊಳ್ಳಲಾಗಿತ್ತು.

# ರೈತರಿಗೆ ಮುನ್ಸೂಚನೆಗಳು

## 1.ಮಣ್ಣು ವಿಜ್ಞಾನ / ಬೇಸಾಯ ಶಾಸ್ತ್ರ:

* ಭತ್ತ ನಾಟಿಗೂ ಮುಂಚೆ ಮಣ್ಣು ಪರೀಕ್ಷೆ ಮಾಡಿಸಿ, ಫಲಿತಾಂಶದ ಆಧಾರದ ಮೇಲೆ ರಸಗೊಬ್ಬರಗಳನ್ನು ಉಪಯೋಗಿಸಿ.
* ಸಾವಯವ ಗೊಬ್ಬರವನ್ನು ನಾಟಿಯ 15–20 ದಿನಗಳ ಮುಂಚೆ ಭೂಮಿಗೆ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಬೇಕು.
* ಬಿತ್ತನೆ ಬೀಜಗಳನ್ನು ಅಜೋಸ್ಪೀರಿಲಂ, ಪಿಎಸ್‌ಬಿ ಮತ್ತು ವ್ಯಾಮ್‌ನಿಂದ ಉಪಚರಿಸಿ ಬಿತ್ತನೆ ಮಾಡಬೇಕು.
* ಶೇ. 50 ರಷ್ಟು ಶಿಫಾರಸ್ಸು ಮಾಡಿದ ಸಾರಜನಕ ಮತ್ತು ಪೂರ್ಣ ಪ್ರಮಾಣದ ರಂಜಕ ಮತ್ತು ಪೊಟ್ಯಾಷ್‌ನ್ನು ನಾಟಿ ಮಾಡುವ ಸಮಯದಲ್ಲಿ ಕೊಡಬೇಕು.
* ಉಳಿದ ಶೇ. 50 ರಷ್ಟು ಸಾರಜನಕವನ್ನು ನಾಟಿಯಾದ 30 ದಿನ ಮತ್ತು 45 ದಿನಗಳಲ್ಲಿ ಸಮ ಪ್ರಮಾಣದಲ್ಲಿ ಕೊಡಬೇಕು.ಯಾವುದಾದರು ಪೋಷಕಾಂಶ ಕೊರತೆ ಕಂಡು ಬಂದಲ್ಲಿ ನೀರಿನಲ್ಲಿ ಕರಗುವ ಗೊಬ್ಬರಗಳನ್ನು ಉಪಯೋಗಿಸಬೇಕು.

## 2. ಸಸ್ಯ ಸಂರಕ್ಷಣೆ:

### ಮಾವು: ಜಿಗಿಹುಳು:

ಅಪ್ಸರೆ ಮತ್ತು ಪ್ರೌಢ ಕೀಟಗಳು ಹೂ ಬಿಡುವ ಸಮಯದಲ್ಲಿ ಹೂಗೊಂಚಲು ಮತ್ತು ಚಿಗುರುಗಳಿಂದ ರಸ ಹೀರುತ್ತವೆ. ಹೂಗೊಂಚಲು ಮತ್ತು ಚಿಗುರು ಬಾಡಿ ಒಣ ರೆಂಬೆಯ ಮೇಲೆ ಕಪ್ಪಾಗಿ ಹೂಗಳು ಸುಟ್ಟಂತಾಗುತ್ತವೆ. ಕೀಟದ ಬಾಧೆಯಿಂದ ಮರಗಳ ದೇಹಶಕ್ತಿ ಕಡಿಮೆಯಾಗಿ ಫಲಬಿಡುವ ಸಾಮರ್ಥ್ಯ ಕಡಿಮೆಯಾಗುತ್ತದೆ. ಬೇಸಿಗೆ ತಿಂಗಳಲ್ಲಿ ಕೀಟದ ಬಾಧೆ ಹೆಚ್ಚಾಗಿರುತ್ತದೆ.

### ಹತೋಟಿ:

ಹೂಬಿಡುವ ಸಮಯದಲ್ಲಿ ಎಕರೆಗೆ 10 ಹಳದಿ ಅಂಟಿನ ಬಲೆಯನ್ನು ಬಳಸಬೇಕು. ಹೂ ಬಿಡುವುದಕ್ಕೆ ಮುಂಚೆ ಮತ್ತು ಕಾಯಿ ಕಚ್ಚಿದ ಕೂಡಲೇ ಅಸಿಟಾಮಿಪ್ರಿಡ್ 0.2 ಗ್ರಾಂ ಅಥವಾ ಇಮಿಡಾಕ್ಲೋಪ್ರಿಡ್ 0.3 ಮಿಲೀ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

## 3. ತೋಟಗಾರಿಕೆ:

### ಅಡಿಕೆ:

* ಅಡಿಕೆ ಮರಗಳ ಕಾಂಡಗಳು ಬಿಸಿಲಿನ ಝಳಕ್ಕೆ ಸುಟ್ಟು ಹೋಗುವ ಸಂಭವವಿರುವುದರಿಂದ ಕಾಂಡಗಳಿಗೆ ಸುಣ್ಣವನ್ನು ಲೇಪನ ಮಾಡಬೇಕು. ನಂತರ ಗರಿಯಿಂದ ಕಟ್ಟಿದರೆ ಉತ್ತಮ.
* ಬೇಸಿಗೆಯ ತಿಂಗಳುಗಳಲ್ಲಿ ನೀರಿನ ಅವಶ್ಯಕತೆ ಹೆಚ್ಚಿರುವುದರಿಂದ ತೋಟಗಳಲ್ಲಿ ಹಸಿರೆಲೆಗೊಬ್ಬರವನ್ನು ಬೆಳೆಸಬೇಕು. ಸೆಣಬು / ಡಯಾಂಚ / ವೆಲ್‌ವೆಟ್ ಬೀನ್ಸ್ ಬೆಳೆಗಳನ್ನು ಬೆಳೆದರೆ ಉತ್ತಮ.
* ಯಾವುದೇ ಕಾರಣಕ್ಕೂ ತೋಟಗಳಲ್ಲಿ ಉಳುಮೆ ಮಾಡಬೇಡಿ.

### ಇಂಗಾರು ಒಣಗುವ ರೋಗ:

ಹೂಗೊಂಚಲು ತುದಿಯಿಂದ ಬುಡದ ಕಡೆಗೆ ಹಳದಿಯಾಗಿ ಒಣಗುತ್ತದೆ. ಬೇಸಿಗೆಯಲ್ಲಿ ಇಂಗಾರು ಒಣಗುವುದು ಸಾಮಾನ್ಯವಾಗಿರುತ್ತದೆ. ಹೆಚ್ಚಿನ ಉಷ್ಣಾಂಶ, ಶಿಲೀಂಧ್ರ ಮತ್ತು ನೀರಿನ ಕೊರತೆ ಪ್ರಮುಖ ಕಾರಣಗಳಾಗಿರುತ್ತವೆ.

### ಹತೋಟಿ:

ರೋಗಕ್ಕೆ ತುತ್ತಾಗಿ ಒಣಗಿದ ಇಂಗಾರಗಳನ್ನು ನಾಶಪಡಿಸಬೇಕು. ಹೂಗೊಂಚಲು ಅರಳುವ ಸಮಯದಲ್ಲಿ ಡೈಥೇನ್ ಎಮ್ 45 2.5 ಗ್ರಾಂ ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

## 4. ಹೈನುಗಾರಿಕೆ:

* ಹೈನುರಾಸುಗಳಲ್ಲಿ ಹಾಲು ಉತ್ಪಾದನೆ ಮತ್ತು ಸಂತಾನೋತ್ಪತ್ತಿ ಕ್ರಿಯೆಗಳನ್ನು ಉತ್ತಮವಾಗಿ ನಿರ್ವಹಿಸಲು ಸಮತೋಲನ ಪಶು ಆಹಾರ (ದಾಣಿ ಮಿಶ್ರಣ) ವನ್ನೇ ಬಳಸಿ.
* ಕೊಠಡಿಯಲ್ಲಿ ಲಾಭದಾಯಕ ಕುರಿ ಸಾಕಣೆ ಮಾಡಬೇಕಾದರೆ, ರೈತರುಗಳು ರಸಮೇವನ್ನು ತಪ್ಪದೇ ಬಳಸುವುದು ಸೂಕ್ತ.

## 5. ಮೀನು ಕೃಷಿ:

ಬೆಳೆಯುತ್ತಿರುವ ಮೀನುಗಳ ಆರೋಗ್ಯ ಮತ್ತು ಬೆಳವಣಿಗೆಗೆ ಕೃತಕ ಆಹಾರದ ಬಳಕೆ ಮಾಡಬಹುದು. ನೀರಿನ ಆವಿ ಹೆಚ್ಚಾಗುವ ಈ ಬೇಸಿಗೆಯಲ್ಲಿ 4–5 ಅಡಿ ನೀರಿನ ಮಟ್ಟವನ್ನು ಕಾಪಾಡಿಕೊಳ್ಳಬೇಕು. ತಪ್ಪದೇ 10 ದಿನಗಳಿಗೊಮ್ಮೆ ಗುಂಟೆಗೆ 10 ಕೆಜಿ ಯಂತೆ ದನದ ಸಗಣಿಯನ್ನು ಕೊಳದ ನೀರಿಗೆ ಸೇರಿಸಬೇಕು.

ಪ್ರಧಾನ ಸಂಪಾದಕರು : ಡಾ. ದೇವರಾಜ ಟಿ.ಎನ್.
ಸಹ ಸಂಪಾದಕರು : ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ॥ ಜಯದೇವಪ್ಪ ಜಿ.ಕೆ. ಶ್ರೀ ಪ್ರಸನ್ನಕುಮಾರ ಎನ್., ಮತ್ತು ಹೆಚ್. ಎಂ. ಸಣ್ಣಗೌಡ್ರ
ಪ್ರಕಾಶಕರು : ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ –577 004, ಕರ್ನಾಟಕ
ಮುದ್ರಕರು : ಅಕ್ಷರ ಪ್ರಿಂಟರ್ಸ್, ದಾವಣಗೆರೆ. ಫೋ : 253341.